8. ಗಮನ ಸೆಳೆಯುವ ಸೂಚನೆಗಳು:

1. ವಿಷಯ: ಗ್ರಾಮ ಪಂಚಾಯಿತಿಗಳ ಗ್ರಂಥಾಲಯಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರುಗಳನ್ನು ಖಾಯಂಗೊಳಿಸುವ ಬಗ್ಗೆ

ಶ್ರೀ ಕೆ. ಶಿವಮೂರ್ತಿ (ಮಾಯಕೊಂಡ) (ಕೆ.ಬಿ. ಕೋಳಿವಾಡರವರ ಪರವಾಗಿ):– ರಾಜ್ಯದಲ್ಲಿರುವ ಗ್ರಾಮ ಪಂಚಾಯತಿಗಳ ಗ್ರಂಥಾಲಯಗಳಲ್ಲಿ ಮೇಲ್ವಿಚಾರಕರುಗಳಾಗಿ ಕಾರ್ಯನಿರ್ವಹಿಸುತ್ತಿರುವ ಶೇ. 50 ರಷ್ಟು ಅಂಗವಿಕಲರು, ಶೇ. 25 ರಷ್ಟು ವಿಧವೆಯರು ಹಾಗೂ ಶೇ. 25 ರಷ್ಟು ವಿಧವೆಯರು ಹಾಗೂ ಶೇ. 25 ಇನ್ನಿತರೆ ಸಾಮಾನ್ಯ ವರ್ಗದವರು ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಇವರುಗಳನ್ನು ಖಾಯಂಗೊಳಿಸುವ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಪಶು ಸಂಗೋಪನೆ ಸಚಿವರು – ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ 5766 ಗ್ರಾಮಪಂಚಾಯಿತಿ ಗ್ರಂಥಾಲಯಗಳಿದ್ದು ಗ್ರಾಮಪಂಚಾಯಿತಿ ಕಾರ್ಯಾಲಯದವರು ನೀಡಿರುವ ಕಟ್ಟಡಗಳಲ್ಲಿ ಮತ್ತು ಕೆಲವು ಕಡೆ ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ ಎಸ್.ಎಸ್.ಎಲ್.ಸಿ. ಯಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳನ್ನು ಗೌರವ ಸಂಭಾವನೆ ಆಧಾರದ ಮೇಲೆ ನಿಯಮಾನುಸಾರ ನೇಮಿಸಿಕೊಂಡಿದ್ದು, ಅವರು ಮೇಲ್ವಿಚಾರಕರಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ, ಇವರಲ್ಲಿ 1183 ಮೇಲ್ವಿಚಾರಕರು ಪರಿಶಿಷ್ಟ ಜಾತಿ, 377 ಮೇಲ್ವಿಚಾರಕರು ಪರಿಶಿಷ್ಟ ಪಂಗಡ, 2026 ಮಹಿಳಾ ಮೇಲ್ವಿಚಾರಕರು, 26 ಮೇಲ್ವಿಚಾರಕರು ಅಂಗವಿಕಲರಾಗಿದ್ದು ಹಾಗೂ 2464 ಮೇಲ್ವಿಚಾರಕರು 10 ವರ್ಷಕ್ಕೆ ಮೇಲ್ಪಟ್ಟು ಸೇವೆ ಸಲ್ಲಿಸುತ್ತಿದ್ದಾರೆ ಮತ್ತು 3302, 10 ವರ್ಷಕ್ಕಿಂತ ಕಡಿಮೆ ಸೇವೆ ಸಲ್ಲಿಸುತ್ತಿದ್ದಾರೆ. ಇವರಿಗೆ ಪ್ರಸ್ತುತ ಸರ್ಕಾರದ ಆದೇಶ ಸಂ: ಇಡಿ 695 ಎಲ್ಐಬಿ 2012 ಬೆಂಗಳೂರು ದಿನಾಂಕ: 15.05.2013 ರ ಪತ್ರದಲ್ಲಿ ₹ 2500/– ರಿಂದ 5500/–

ಕ್ಕೆ ಹೆಚ್ಚಿಸಿ ಆದೇಶಿಸಿದಂತೆ, ಮಾಸಿಕ ₹ 5500/– ಗಳನ್ನು ಗೌರವ ಸಂಭಾವನೆಯಾಗಿ ನೀಡಲಾಗುತ್ತಿದೆ ಹಾಗೂ ಪ್ರತಿ ಗ್ರಾಮ ಪಂಚಾಯತಿ ಗ್ರಂಥಾಲಯಕ್ಕೆ ದಿನಪತ್ರಿಕೆ ವೆಚ್ಚ ಮಾಸಿಕ ₹ 400/–, ಸಾದಿಲ್ವಾರು ವೆಚ್ಚ ವಾರ್ಷಿಕ ₹ 500/– ಮತ್ತು ₹ 100/– ಗಳನ್ನು ಶುಚಿತ್ವ ಭತ್ಯೆಯಾಗಿ ಪ್ರತಿ ಮಾಹೆಯಾನ ನೀಡಲಾಗುತ್ತಿದೆ.

ಗ್ರಾಮಪಂಚಾಯತಿ ಗ್ರಂಥಾಲಯಗಳ ಮೇಲ್ವಿಚಾರಕರು ಗೌರವ ಸಂಭಾವನೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಪೂರ್ಣಕಾಲಿಕ ನೌಕರರಲ್ಲ. ಆದಕಾರಣ ಅವರಿಗೆ ಕನಿಷ್ಟ ವೇತನ ಅನ್ವಯಿಸುವುದಿಲ್ಲ. ಕನಿಷ್ಟ ದಿನಗೂಲಿ ಮಂಜೂರು ಮಾಡಲು ಅವಕಾಶವಿರುವುದಿಲ್ಲ ಹಾಗೂ ಖಾಯಂಗೊಳಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಶ್ರೀ ಕೆ. ಶಿವಮೂರ್ತಿ:– ಮಾನ್ಯ ಅಧ್ಯಕ್ಷರೆ, ಗ್ರಾಮ ಪಂಚಾಯತಿಗಳ ಗ್ರಂಥಾಲಯಗಳಲ್ಲಿ ಮೇಲ್ವಿಚಾರಕರುಗಳನ್ನು ನೇಮಕ ಮಾಡಿರುತ್ತಾರೆ, ಅವರು ಬಹಳ ದಿವಸದಿಂದ ಹಾಗೇ ಕೆಲಸ ಮಾಡುತ್ತಿದ್ದು, ಅವರಿಗೆ ಕೊಡತಕ್ಕ ಸಂಬಳ, ಸೌಲಭ್ಯ ಮತ್ತು ಸೆಕ್ಯೂರಿಟಿ ಕಡಿಮೆ ಇದೆ. ಗ್ರಾಮ ಪಂಚಾಯತಿ ಮಟ್ಟದಲ್ಲಿ ಇದೊಂದು ಮಾಹಿತಿ ಕೇಂದ್ರ. ಬೆಳಗ್ಗೆ ಎದ್ದ ತಕ್ಷಣ ಪೇಪರ್ ಓದತಕ್ಕಂಥವರು, ಹವ್ಯಾಸಿಗಳು ಮತ್ತು ವಿಷಯ ಚರ್ಚೆ ಆಗತಕ್ಕಂಥದ್ದು, ಕೆಲವು ತೀರ್ಪು ಮತ್ತು ತೀರ್ಮಾನಗಳು ಗ್ರಾಮೀಣ ಮಟ್ಟಕ್ಕೆ ಮುಟ್ಟುವ ಒಂದು ಆಂದೋಲನ ಗ್ರಂಥಾಲಯವಾಗಿದೆ. 300 ರೂ. ಗಳಲ್ಲಿ ಇವರನ್ನು ಮೇಲ್ವಿಚಾರಕರನ್ನಾಗಿ ನೇಮಕಾತಿ ಮಾಡಿದ್ದರು. ಈಗ 800 ರೂ. ಗಳವರೆಗೆ ಸಹಾಯಧನ ಕೊಡುತ್ತಿದ್ದಾರೆ. ಅವರಿಗೆ ವಯಸ್ಸಾಗುತ್ತಿದೆ, ಅವರು ಪ್ರತಿ ಸಲ ಬಂದು ಕೇಳಿಕೊಳ್ಳುತ್ತಿದ್ದಾರೆ, ಅವರನ್ನು ಖಾಯಂ ಮಾಡಿಕೊಂಡು ಅವರಿಗೆ ಸೆಕ್ಯೂರಿಟಿ ಕೊಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ:– ಅವರಿಗೆ ಕನಿಷ್ಟ ದಿನಗೂಲಿ ಮಂಜೂರು ಮಾಡಲು ಅವಕಾಶವಿರುವುದಿಲ್ಲ ಹಾಗೂ ಖಾಯಂಗೊಳಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಶ್ರೀ ಕೆ. ಶಿವಮೂರ್ತಿ:– 10 ಕೆಲಸ ಮಾಡಿದವರನ್ನು ಖಾಯಂ ಮಾಡಬೇಕೆಂದು ಸರ್ಕಾರವೇ ಒಪ್ಪಿಕೊಂಡಿದೆ.

ಅಧ್ಯಕ್ಷರು:– ಆಯಿತು, ಬಿಡಿ.

2. ವಿಷಯ: ಹಾಸನ ಜಿಲ್ಲೆ, ಹೊಳೆನರಸೀಪುರ ತಾಲ್ಲೂಕಿನ ಹಳೇಕೋಟೆ ಹೋಬಳಿ ವ್ಯಾಪ್ತಿಯಲ್ಲಿರುವ ಹಳ್ಳಿಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ಕಾರ್ಯಗತಗೊಳಿಸುವ ಬಗ್ಗೆ:–

ಶ್ರೀ ಹೆಚ್.ಡಿ. ರೇವಣ್ಣ (ಹೊಳೇನರಸಿಪುರ):– ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆ, ಹೊಳೆನರಸೀಪುರ ತಾಲ್ಲೂಕಿನ ಹಳೇಕೋಟೆ ಹೋಬಳಿ ವ್ಯಾಪ್ತಿಯಲ್ಲಿರುವ ಹಳ್ಳಿಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ಕಾರ್ಯಗತಗೊಳಿಸುವಂತೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನ ಸೆಳೆದು ಬಯಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಪಶು ಸಂಗೋಪನೆ ಸಚಿವರು – ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆ, ಹೊಳೆನರಸೀಪುರ ತಾಲ್ಲೂಕಿನ ಹಳೇಕೋಟೆ ಹೋಬಳಿಯಲ್ಲಿ ಒಟ್ಟು 93 ಜನವಸತಿಗಳಿದ್ದು, ಇವುಗಳ ಪೈಕಿ 25 ಜನವಸತಿಗಳಿಗೆ ಕೆಳಕಾಣಿಸಿರುವ 3 ಕುಡಿಯುವ ನೀರಿನ ಯೋಜನೆಗಳ ಮುಖಾಂತರ ನೀರು ಒದಗಿಸಲು ಯೋಜನೆಗಳನ್ನು ಕೈಗೊಳ್ಳಲಾಗಿದೆ. ವಿವರಗಳು ಈ ಕೆಳಕಂಡಂತಿವೆ.

1) ಹರದನಹಳ್ಳಿ ಮತ್ತು ಇತರೆ 7 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸಲು ₹ 132.00 ಲಕ್ಷಗಳ ಮೊತ್ತದಲ್ಲಿ ಯೋಜನೆಯನ್ನು ಕೈಗೊಳ್ಳಲಾಗಿದ್ದು, ಕಾಮಗಾರಿಯು ಮುಕ್ತಾಯದ ಹಂತದಲ್ಲಿರುತ್ತದೆ.
2) ಹಂಗರಹಳ್ಳಿ ಮತ್ತು ಇತರೆ 4 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸಲು ₹ 166.18 ಲಕ್ಷಗಳ ಮೊತ್ತದಲ್ಲಿ ಯೋಜನೆಯನ್ನು